Sri Vyasatirtha Vidyapeeta
Jnanenaiva param padam
श्री व्यासतीर्थ विद्यापीठम्
ज्ञानेनैव परम् पदम्



ಶ್ರೀಧೂಮಾಲಕ್ಷ್ಮೀನರಸಿಂಹೋ ವಿಜಯತೇ

ಶ್ರೀಶ್ರೀಮದಲಗಟ್ಟೆಪ್ರಾಣರಾಜೋ ವಿಜಯತೇ

ಕುಲದೇವತಾ ಶ್ರೀತುಳಜಾಭವಾನೀ ವಿಜಯತೇ

ಶ್ರೀಸತ್ಯವೀರತೀರ್ಥಗುರುರಾಜಾ ವಿಜಯಂತೇ

ಶ್ರೀಗುರುಭ್ಯೋ ನಮ:

ಸ ಹಿ ಸರ್ವಮನೋವೃತ್ತಿಪ್ರೇರಕ:

# ನರಸಿಂಹನಖಸ್ತುತಿ

ಶ್ರೀಮದಾಚಾರ್ಯರು ನರಸಿಂಹದೇವರನ್ನು, ವಿಶೇಷವಾಗಿ ಅವರ ಉಗುರುಗಳನ್ನು ಸ್ತುತಿಸುವ ಗ್ರಂಥ **ನರಸಿಂಹನಖಸ್ತುತಿ**. ಈ ಗ್ರಂಥದಲ್ಲಿ ಎರಡು ಶ್ಲೋಕಗಳಿವೆ '**ಪಾಂತ್ವಸ್ಮಾನ್..**' ಎಂದು ಆರಂಭವಾಗುವ ಶ್ಲೋಕವು ಮೊದಲನೆಯದ್ದು. '**ಲಕ್ಷ್ಮೀಕಾಂತ..**' ಎಂದು ಆರಂಭವಾಗುವ ಶ್ಲೋಕವು ಎರಡನೆಯದ್ದು. ಪದ್ಯದ್ವಯಾತ್ಮಕವಾದ ಗ್ರಂಥವನ್ನು, ತ್ರಿವಿಕ್ರಮಪಂಡಿತಾ-ಚಾರ್ಯರು ರಚಿಸಿರುವ ವಾಯುಸ್ತುತಿಯ ಆರಂಭದಲ್ಲಿ ಮತ್ತು ಕೊನೆಯಲ್ಲಿ ಹೇಳುವುದು ಅತ್ಯಂತ ದೃಢವಾದ, ಸಾರ್ವತ್ರಿಕವಾದ, ನಿರ್ವಿವಾದವಾದ, ಶುದ್ಧಪದ್ಧತಿ.

(ಗ್ರಂಥಮಾಲಿಕಾಸ್ತೋತ್ರದಲ್ಲಿರುವ ಗ್ರಂಥಗಳ ಉಲ್ಲೆಖಕ್ರಮಕ್ಕಿಂತಲೂ ಸ್ವಲ್ಪ ಬೇರೆಯಾದ, ಅಧ್ಯಯನಕ್ರಮವನ್ನು ಅನುಸರಿಸಿ ಗ್ರಂಥಗಳ ಬಗ್ಗೆ ನಿರೂಪಿಸುತ್ತೇನೆ.)

श्रीमूलगोपालकृष्णो विजयते

श्री पट्टाभिरामो विजयते

श्री व्यासराजो विजयते

## ಈ ಸ್ತೋತ್ರದ ಬಗ್ಗೆ ಜ್ಞಾನಿಗಳ ಉಲ್ಲೇಖ

೧)'ನರಸಿಂಹನಖಸ್ತೋತ್ರಂ ಚಕ್ರೇ..' ಎಂದು **ಶ್ರೀಚಂದ್ರಿಕಾಚಾರ್ಯರು** ಗಂಥಮಾಲಿಕಾಸ್ತೋತ್ರದಲ್ಲಿ ನಿರೂಪಿಸಿದ್ದಾರೆ.

೨)'ಪಾಂತ್ವಸ್ಮಾನಿತಿ ಪದ್ಯಸ್ಯ....|....ಮಧ್ವಕೃತಿತಾ...'ಎಂದು ನೋದೆ **ಶ್ರೀವಾದಿರಾಜಸ್ವಾಮಿಗಳು** ಏಕಾದಶೀನಿರ್ಣಯ ಎಂಬ ಗ್ರಂಥದಲ್ಲಿ ಈ ಗ್ರಂಥದ ಬಗ್ಗೆ ಉಲ್ಲೇಖವನ್ನು ಮಾಡಿದ್ದಾರೆ. ಅಲ್ಲದೆ ತಮ್ಮ ಗ್ರಂಥಮಾಲಿಕಾ-ಸ್ತೋತ್ರದಲ್ಲಿಯೂ 'ಸ್ತುತೀ..' ಎಂದು ಹೇಳಿದ್ದಾರೆ.

೪)**ಶ್ರೀಯಾದವಾರ್ಯರು** ತಮ್ಮ ಗ್ರಂಥಮಾಲಿಕಾಸ್ತೋತ್ರದಲ್ಲಿ 'ವಿಷ್ಣೋಃ ಸ್ತೋತ್ರಯುಗಂ' ಎಂಬಲ್ಲಿ ಇದನ್ನು ಸೂಚಿಸಿದ್ದಾರೆ.

೫)**ಬಿದರಹಳ್ಳಿ ಶ್ರೀನಿವಾಸತೀರ್ಥರು** 'ಸ್ತುತಿಯುಗಲಂ' ಎಂದು ತಮ್ಮ ಗ್ರಂಥಮಾಲಿಕಾಸ್ತೋತ್ರದಲ್ಲಿ 'ಹೇಳಿದ್ದಾರೆ. ಮತ್ತು ತಮ್ಮ **ವಾಯುಗದ್ಯ-ದಲ್ಲಿಯೂ** 'ನಖಸ್ತುತಿ....ಗ್ರಂಥಕರ್ತ್ರೇ' ಎಂದು ಹೇಳಿದ್ದಾರೆ.

(ಉಲ್ಲೇಖಿಸಿದ ಪ್ರಮಾಣಗಳಲ್ಲಿ ಎರಡು ಸ್ತೋತ್ರಗಳು ಎಂದರೆ ದ್ವಾದಶ ಸ್ತೋತ್ರ, ನಖಸ್ತುತಿ ಎಂದರ್ಥ. ಸಂದೇಹ ಬೇಡ.)

೬) **ಜಯರಾಮಾಚಾರ್ಯರು** ಪೂಜಾಕಲ್ಪಲತಾ ಎಂಬ ಪದ್ಯಮಾಲಾ-ವ್ಯಖ್ಯಾನರೂಪಗ್ರಂಥದಲ್ಲಿ 'ನಖಸ್ತುತಿಯನ್ನು ಪಠಿಸಿ, ದೇವರ ಪೂಜೆಯನ್ನು

**ಮಾಡಬೇಕು'** ಎಂಬ ಅಪೂರ್ವಾಂಶವನ್ನು ತಿಳಿಸುತ್ತಾರೆ. **..ಸರ್ವವಿಘ್ನ-ನಿವಾರಾಣಾರ್ಥಂ ಪಾಂತ್ವಸ್ಮಾನ್ ಇತಿ ಶ್ಲೋಕದ್ವಯಂ ಪಠೇತ್.**

ಲ) ಇದಲ್ಲದೆ ಇನ್ನನೇಕಜ್ಞಾನಿಗಳು, ಮುಖ್ಯವಾಗಿ ಈ ಗ್ರಂಥದ ವ್ಯಾಖ್ಯಾನಕಾರರು 'ಈ ಗ್ರಂಥವು ಆಚಾರ್ಯರಚಿತ' ಎಂದು ಸ್ಪಷ್ಟ-ಪಡಿಸಿದ್ದಾರೆ

## ನರಸಿಂಹನಖಸ್ತುತಿರಚನೆಯ ಹಿನ್ನೆಲೆ

ನಖಸ್ತುತಿ ಹಾಗೂ ವಾಯುಸ್ತುತಿಗಳು ಒಟ್ಟಿಗೆ ರಚಿತವಾದ್ದರಿಂದ ಅವುಗಳ ಹಿನ್ನೆಲೆಯು ಒಂದೇ ಆಗಿದೆ. ಹಾಗಾಗಿ ವಾಯುಸ್ತುತಿರಚನೆಯ ಹಿನ್ನೆಲೆಯನ್ನು ಅರ್ಥಮಾಡಿಕೊಂಡರೆ ನಖಸ್ತುತಿಯ ಹಿನ್ನೆಲೆಯೂ ಸ್ಪಷ್ಟವಾಗುತ್ತದೆ. ಹಾಗಾಗಿ ವಾಯುಸ್ತುತಿಯ ಹಿನ್ನೆಲೆಯನ್ನು ನಾವು ನೋಡೋಣ.

ಒಮ್ಮೆ ತ್ರಿವಿಕ್ರಮಪಂಡಿತಾಚಾರ್ಯರು ಆಚಾರ್ಯರ ಜೊತೆಯಲ್ಲಿ ಬದರಿಕಾಶ್ರಮಕ್ಕೆ ಹೋಗಿರುತ್ತಾರೆ. ಬದರಿಕಾಶ್ರಮದಲ್ಲಿ ಇರುವ ನಾರಾಯಣ-ದೇವಾಲಯದಲ್ಲಿ ಗರ್ಭಗುಡಿಯ ಬಾಗಿಲನ್ನು ಮುಚ್ಚಿ, ನಾರಾಯಣದೇವರನ್ನು ಆಚಾರ್ಯರು ಪೂಜಿಸುವಾಗ, 'ಈಗ ಆಚಾರ್ಯರು ಏನು ಮಾಡುತ್ತಿ-ರುವವರು?' ಎಂಬ ಜಿಜ್ಞಾಸೆ ತ್ರಿವಿಕ್ರಮಪಂಡಿತಾಚಾರ್ಯರಿಗೆ ಮೂಡುತ್ತದೆ. ಆಗ ಬಾಗಿಲಿನ ಕಿಂಡಿಯಿಂದ ನೋಡಿದ ತ್ರಿವಿಕ್ರಮಪಂಡಿತಾಚಾರ್ಯರು,

'ದ್ವಾಪರಯುಗದಲ್ಲಿ ಜಾಂಬವಂತನು, ಶ್ರೀಕೃಷ್ಣರೂಪಲ್ಲಿ ಶ್ರೀರಾಮರೂಪವನ್ನು ಕಂಡಂತೆ, ಮಧ್ವರೂಪದಲ್ಲಿ ಹನುಮದ್ರೂಪವನ್ನು ನೋಡಿ, ಆನಂದಮಗ್ನ-ರಾಗುತ್ತಾರೆ. ಆಗ 'ಆಚಾರ್ಯರು ಸಾಕ್ಷಾತ್ ವಾಯುದೇವರೇ' ಎಂದು ನಿಶ್ಚಯಿಸಿ, ಮೂಲರೂಪಿವಾಯುದೇವರ, ಅವರ ಅವತಾರಗಳ ಸ್ತೋತ್ರವನ್ನು ರಚಿಸುತ್ತಾರೆ. 'ಈ ಸ್ತುತಿಯು ಸಜ್ಜನಲೋಕದಲ್ಲಿ ಪ್ರಸಿದ್ಧವಾಗಬೇಕು' ಎಂಬ ಇಚ್ಛೆಯಿಂದ ಸ್ತೋತ್ರವನ್ನು ಶ್ರೀಮದಾಚಾರ್ಯರಿಗೆ ತೋರಿಸಿ, ವಾಯುಸ್ತುತಿಯ ಪುನಶ್ಚರಣವನ್ನು ಮಾಡುವವರಿಗೆ 'ಅವರವರಿಗೆ ಅಪೇಕ್ಷಿತವಾದ ಫಲವನ್ನು ಕೊಡುವಂತಹ ಸಾಮರ್ಥ್ಯ ಗ್ರಂಥಕ್ಕೆ ಇರಬೇಕು' ಎಂಬ ವರವನ್ನು ಪ್ರಾರ್ಥಿಸುತ್ತಾರೆ. ಅನಂತರದಲ್ಲಿ ಆಚಾರ್ಯರು ಸರ್ವ-ಪಂಡಿತಶ್ರೇಷ್ಠರಾದ, ತ್ರಿವಿಕ್ರಮ-ಪಂಡಿತಾಚಾರ್ಯರು ಶಿಷ್ಯಭಾವದಿಂದ ತೋರಿಸಿದ ವಾಯುಸ್ತುತಿರೂಪ-ಗ್ರಂಥವನ್ನು ನೋಡಿ, ಪ್ರಸನ್ನರಾಗಿ, 'ಒಂದೊಂದು ಶ್ಲೋಕವು ಒಂದೊಂದು ಫಲವನ್ನು ಕೊಡುವ ಸಾಮರ್ಥ್ಯ ಪಡೆದುಕೊಳ್ಳಲಿ' ಎಂಬ ವರವನ್ನು ನೀಡುತ್ತಾರೆ. ಜೊತೆಗೆ ಶ್ರೀಮದಾಚಾರ್ಯರು ವಾಯುಸ್ತುತಿಯ ಉಪಾಸನೆಗೆ ಪೋಷಕವಾದ, ಸರ್ವಾನಿಷ್ಟನಿವರ್ತಕಶ್ರೀನೃಸಿಂಹನಖಸ್ತುತಿಪ್ರತಿಪಾದಕಶ್ಲೋಕದ್ವಯಗಳನ್ನು ರಚಿಸಿ, ಮಂಗಳಾಚರಣರೂಪದಲ್ಲಿ ನೀಡುತ್ತಾರೆ. ಮತ್ತು 'ಈ ಗ್ರಂಥದ ಆರಂಭದಲ್ಲಿ, ಹಾಗೂ ಕೊನೆಯಲ್ಲಿ ಈ ಶ್ಲೋಕಗಳನ್ನು ಕರಸಂಪುಟಾಕಾರದಿಂದ ಪಠಿಸುವವರಿಗೆ ಫಲವು ಉಂಟಾಗುತ್ತದೆ' ಎಂದು ಹೇಳಿ, ಈ ಎರಡು ಶ್ಲೋಕಗಳನ್ನು ಕೊಟ್ಟರು. ಎಂದು ಐತಿಹ್ಯ. (ಛ.ವ್ಯಾಖ್ಯಾನ)

ಈ ಗ್ರಂಥಕ್ಕೆ ಮೂರು ವ್ಯಾಖ್ಯಾನಗಳು ಉಪಲಬ್ಧವಾಗಿವೆ.

1. **ಪೇಜಾವರ ಮಠಾಧಿಪತಿಗಳಾದ ವಿಶ್ವಪತಿತೀರ್ಥರ ವ್ಯಾಖ್ಯಾನ**
2. **ಛಲಾರಿ ಶೇಷಾಚಾರ್ಯರ ವ್ಯಾಖ್ಯಾನ**
3. **ಭಗವಂತರಾಯರ ವ್ಯಾಖ್ಯಾನ**

ಹೀಗೆ ನಮ್ಮ ದೇಶದ ಪವಿತ್ರತಾಣವಾದ, ಹಿಮಾಲಯದ ತಪ್ಪಲಿನಲ್ಲಿರುವ, ಅಲಕನಂದೆಯ ದಡದಲ್ಲಿರುವ, ಆ ನಾರಾಯಣದೇವರ ದೇವಸ್ಥಾನದಲ್ಲಿ, ಶ್ರೀಮದಾಚಾರ್ಯರ ಎದುರಿನಲ್ಲಿ, ಅವರ ದಿವ್ಯ ರೂಪವನ್ನು ಕಂಡು, ಅವರಿಗೆ ಸಮ್ಮತವಾಗುವಂತೆ ಮಾಧ್ವರ ಉಸಿರಾದ ವಾಯುಸ್ತುತಿಯ ರಚನೆಯಾಗಿದೆ. ಅಲ್ಲಿಯೇ ನಖಸ್ತುತಿಯ ರಚನೆಯಾಗಿದೆ. ಮತ್ತು ಈ ರೀತಿ ಅನುಷ್ಠಾನಕ್ಕೆ ಶ್ರೀಮದಾಚಾರ್ಯರ ಆದೇಶವಿದೆ ಎಂದು ಚಿಂತಿಸಿದಾಗ ಆಗುವ ಆನಂದಕ್ಕೆ ಪಾರವೇ ಇಲ್ಲ. ಅಂತಹ ನಖಸ್ತುತಿಸಹಿತವಾದ ವಾಯುಸ್ತುತಿಯನ್ನು ಶ್ರದ್ಧೆಯಿಂದ ಪಠಿಸಿ ಆಚಾರ್ಯರ, ನರಸಿಂಹದೇವರ ಅನುಗ್ರಹಕ್ಕೆ ಪಾತ್ರರಾಗೋಣ.

ಶ್ರೀಕೃಷ್ಣಾರ್ಪಣಮಸ್ತು

ಭೂಯಾತ್ತತ್ತ್ವವಿನಿರ್ಣಯಾಯ ಭಗವಾನ್ ಆನಂದತೀರ್ಥೋ ಮುನಿ:

ಶ್ರೀನಿವಾಸ ಕೊರ್ಲಹಳ್ಳಿ

೨೦/೧೨/೨೦೨೦

1226, 3rd Main, 2nd Cross, Krishnamurthypuram, Mysore, Karnataka 570004
https://srivyasatirthavidyapeeta.org/
Contact Number- 9379 887 877